| | | | |
|---|---|---|---|
| 11. ಶ್ರೀ ಚಾಮುಂಡಿ ಮಕ್ಕಳ ಮನೆ, ನಿರ್ಗತಿಕ ಮಕ್ಕಳ ಕುಟೀರ ESI ಆಸ್ಪತ್ರೆ ಹಿಂಭಾಗ, ಬೃಂದಾನವ ಬಡಾವಣೆ, ಮೈಸೂರು | 78821 | 97420 | 54000 |
| 12. KSS ನಿರ್ಗತಿಕ ಮಕ್ಕಳ ಕುಟೀರ, ಮಲ್ಲಹಳ್ಳಿ, ನಂಜನಗೂಡು ತಾಲ್ಲೂಕು | 211433 | 154752 | 49128 |
| 13. ಜಗದ್ಗುರು ರೇಣುಕಾಚಾರ್ಯ ನಿರ್ಗತಿಕ ಮಕ್ಕಳ ಕುಟೀರ ಕಾರ್ಪೂರವಳ್ಳಿ ಕೆ.ಆರ್. ನಗರ ತಾಲ್ಲೂಕು ಸಾಂತ್ವನ | 164752 | 213218 | 215124 |
| 14. ಶಕ್ತಿಧಾಮ ಮೈಸೂರು (ಸಾಂತ್ವನ) | – | 30000 | 100000 |
| 15. ಮಹಿಳಾ ಸಾಮಖ್ಯಾ (ಸಾಂತ್ವನ) | – | – | 120000 |
| 16. ಬಾಪೂಜಿ ಮಕ್ಕಳ ಮನೆ ಮೈಸೂರು | 185145 | 229102 | 223137 |
| **ಶಿಶುಪಾಲನಾ ಕೇಂದ್ರ** | | | |
| 17. ಗೌರಿಶಂಕರ ಶಿಶುಪಾಲನಾ ಕೇಂದ್ರ | – | – | 41020 |
| 18. ಕೆ ಎಸ್ ಎಸ್ ಶಿಶುಪಾಲನಾ ಕೇಂದ್ರ | 27000 | 72000 | 77485 |
| **ಬಾಲ ಕಾರ್ಮಿಕರ ವಿಶೇಷ ಶಾಲೆಗಳು** | | | |
| 19. ಪರಿಸರ ಶಿಕ್ಷಣ ಯೋಜನಾಭಿವೃದ್ಧಿ ಸಂಸ್ಥೆ ಮೈಸೂರು | 145400 | – | – |
| 20. ಹೋಲ್ಡ್ ವರ್ತ್ ಸೇವಾ ಸಂಸ್ಥೆ ಮೈಸೂರು | – | 138400 | – |
| 21. ಮಹಾತ್ಮಾಗಾಂಧಿ ಟ್ರಸ್ಟ್ ಮೈಸೂರು | – | – | 469284 |

## ಚಾಮರಾಜ ನಗರ ಜಿಲ್ಲೆಯಲ್ಲಿ ರೈತರ ಬೆಳೆ ವಿಮೆ

3179 (3980) ಶ್ರೀ ಸಿ. ಗುರುಸ್ವಾಮಿ (ಚಾಮರಾಜನಗರ) ಮಾನ್ಯ ಸಹಕಾರ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಚಾಮರಾಜನಗರ ಜಿಲ್ಲೆಯಲ್ಲಿ ಈ ಸಾಲಿನಲ್ಲಿ ರೈತರ ಬೆಳೆ ವಿಮೆ ಸಹಕಾರ ಸಂಘಗಳಿಂದ ಬಂದಂತಹ ಸುಮಾರು 14 ಸಾವಿರಕ್ಕೂ ಹೆಚ್ಚು ಮೇಲ್ಪಟ್ಟು ಅರ್ಜಿಗಳು ಜಿಲ್ಲಾ ಸಹಕಾರ ಬ್ಯಾಂಕ್‌ನಿಂದ ಸಂಬಂಧಪಟ್ಟ ವಿಮಾ ಇಲಾಖೆಗೆ ಸಕಾಲದಲ್ಲಿ ತಲುಪಿಸದೆ ರೈತರಿಗೆ ತೊಂದರೆಯಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಆ) ಬಂದಿದ್ದರೆ, ಇದನ್ನು ಸರಿಪಡಿಸುವ ದಿಕ್ಕಿನಲ್ಲಿ ಸರ್ಕಾರದ ಕ್ರಮಗಳೇನು

ಶ್ರೀ ಹೆಚ್. ವಿಶ್ವನಾಥ್ (ಸಹಕಾರ ಸಚಿವರು)

ಅ) ಹೌದು

ಆ) ಚಾಮರಾಜನಗರ ಜಿಲ್ಲೆಯ ರೈತರ ಬೆಳೆ ವಿಮೆಗೆ ಸಂಬಂಧಿಸಿದಂತೆ ಜಿಲ್ಲಾ ಬ್ಯಾಂಕಿನಿಂದ ವಿಮಾ ಕಂಪನಿಗೆ ಸಕಾಲದಲ್ಲಿ ಬೆಳೆ ವಿಮೆ ಹಣವನ್ನು ಪಾವತಿಸುವಲ್ಲಿ ಅನಿವಾರ್ಯವಾಗಿ ಆಗಿರುವ ವಿಳಂಬವನ್ನು ಮನ್ನಿಸಿ ಬೆಳೆ ವಿಮೆ ಪ್ರಸ್ತಾವನೆಯನ್ನು ಪುರಸ್ಕರಿಸುವಂತೆ ಸರ್ಕಾರ ಶಿಫಾರಸ್ಸು ಮಾಡಿರುತ್ತದೆ.

ಕರ್ನಾಟಕ ರಾಜ್ಯ ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು ಕೃಷಿ ಮತ್ತು ತೋಟಗಾರಿಕೆ ರವರು ಭಾರತ ಸರ್ಕಾರದ ಹೆಚ್ಚುವರಿ ಕಾರ್ಯದರ್ಶಿಗಳು ಕೃಷಿ ಮತ್ತು ಸಹಕಾರ ಇಲಾಖೆ

ನವದೆಹಲಿಯವರನ್ನು ಬೆಳೆ ವಿಮೆ ಪ್ರಸ್ತಾವನೆಯನ್ನು ವಿಶೇಷ ಪ್ರಕರಣವೆಂದು ಪರಿಗಣಿಸಿ ಬೆಳೆ ವಿಮೆ ಸೌಲಭ್ಯವನ್ನು ಒದಗಿಸಲು ಕೋರಿರುತ್ತಾರೆ.

ರಾಜ್ಯ ಕೃಷಿ: ಆಯುಕ್ತರು ಬೆಂಗಳೂರು ರವರು ಈ ಸಂಬಂಧ ಅನಿವಾರ್ಯದ ವಿಳಂಬದ ಬಗ್ಗೆ ಪ್ರಸ್ತಾವಿಸಿ ವಿಶೇಷ ಪ್ರಕರಣವೆಂದು ಭಾವಿಸಲು ಮಾನ್ಯ ಇನ್ಯೂಷೂರೆನ್ಸ್ ಕಾರ್ಪೊರೆಷನ್ ಬೆಂಗಳೂರು (ಜಿ.ಐಸಿ) ರವರಲ್ಲಿ ಬೆಳೆ ವಿಮೆ ಸೌಲಭ್ಯ ನೀಡಲು ಕೋರಿದ್ದಾರೆ..

ಇತ್ತೀಚೆಗೆ ಮೈಸೂರು ಚಾಮರಾಜನಗರ ಜಿಲ್ಲಾ ಸಹಕಾರ ಕೇಂದ್ರ ಬ್ಯಾಂಕಿನ ವ್ಯವಸ್ಥಾಪಕ ನಿರ್ದೇಶಕರು ನವದೆಹಲಿಗೆ ತೆರಳಿ ಕೃಷಿ ಸಚಿವಾಲಯ ಮತ್ತು ವಿಮಾ ಸಂಸ್ಥೆಯ ಅಧಿಕಾರಿಗಳನ್ನು ಭೇಟಿ ಮಾಡಿ ವಾಸ್ತವ ಸ್ಥಿತಿಯನ್ನು ಮನವರಿಕೆ ಮಾಡಿ ಬೆಳೆ ವಿಮೆ ಪ್ರಸ್ತಾವನೆಯನ್ನು ಅನುಮೋದಿಸಲು ಅಗತ್ಯ ಕ್ರಮ ಕೈಗೊಂಡಿರುತ್ತಾರೆ.

## ಮೆಕ್ಕಲು ಹಾಗೂ ಕೆಸರಿನಿಂದ ತುಂಬಿರುವುದು ಸುವರ್ಣಾವತಿ ಮತ್ತು ಚಿಕ್ಕಹೊಳೆ ಜಲಾಶಯಗಳು

3180 (3982) ಶ್ರೀ ಸಿ. ಗುರುಸ್ವಾಮಿ (ಚಾಮರಾಜನಗರ) ಮಾನ್ಯ ಜಲ ಸಂಪನ್ಮೂಲ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಸುವರ್ಣಾವತಿ ಮತ್ತು ಚಿಕ್ಕಹೊಳೆ ಜಲಾಶಯಗಳಲ್ಲಿ ಬಹಳಷ್ಟು ಮೆಕ್ಕಲು ಮತ್ತು ಕೆಸರಿನಿಂದ ತುಂಬಿದ್ದು, ನೀರು ನಿಲುಗಡೆ ಪ್ರಮಾಣ ಗಣನೀಯವಾಗಿ ಕಡಿಮೆಯಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಆ) ಬಂದಿದ್ದರೆ, ಸರ್ಕಾರ ತೆಗೆದುಕೊಂಡ ಕಾರ್ಯಕ್ರಮಗಳೇನು; ವಿವರಣೆ ನೀಡುವುದು

ಇ) ಕಳೆದ 3 ವರ್ಷಗಳಿಂದ ಈ ಎರಡು ಜಲಾಶಯಗಳ ಕಾಲುವೆ ಬಳಿ ಇರುವ ಸೇತುವೆ ರಸ್ತೆ ಅಭಿವೃದ್ದಿಗೋಸ್ಕರ ಸರ್ಕಾರದಿಂದ ನಿಗದಿಯಾದ ಹಾಗೂ ಬಿಡುಗಡೆಯಾದ ಹಣವೆಷ್ಟು; ಮತ್ತು ಖರ್ಚಾದ ಹಣವೆಷ್ಟು; ವಿವರ ನೀಡುವುದು?

ಶ್ರೀ ಹೆಚ್.ಕೆ. ಪಾಟೀಲ್ (ಜಲ ಸಂಪನ್ಮೂಲ ಸಚಿವರು)

ಅ) ಸುವರ್ಣಾವತಿ ಜಲಾಶಯ ಚಿಕ್ಕಹೊಳೆ ಜಲಾಶಯಗಳಲ್ಲಿನ ಉಪಯುಕ್ತ ನೀರಿನ ಶೇಖರಣಾ ಸಾಮರ್ಥ್ಯ ಕಡಿಮೆಯಾಗಿಲ್ಲದ ಕಾರಣ ಗಣನೀಯ ಹೂಳು ಶೇಖರಣೆಯಾಗಿರುವುದಿಲ್ಲ.

ಆ) ಮೇಲಿನ ಉತ್ತರದಿಂದ ಉದ್ಭವಿಸುವುದಿಲ್ಲ

ಇ) ಸುವರ್ಣಾವತಿ ಹಾಗೂ ಚಿಕ್ಕಹೊಳೆ ಜಲಾಶಯಗಳ ಆಧುನೀಕರಣಕ್ಕೆ ಹಾಗೂ ವಿತರಣಾ ನಾಲೆಗಳ ದುರಸ್ಥಿಗಾಗಿ 2001–02ನೇ ಸಾಲಿನಲ್ಲಿ ಕ್ರಮವಾಗಿ 20 ಲಕ್ಷ ರೂ.ಗಳು ಹಾಗೂ 40 ಲಕ್ಷ ರೂ.ಗಳ ಅನುದಾನ ಹಂಚಿಕೆಯಾಗಿದ್ದು ಬಹುತೇಕ ಕಾಮಗಾರಿಗಳನ್ನು ಪೂರ್ಣಗೊಳಿಸಲಾಗಿದೆ. 2002–03ನೇ ಸಾಲಿನಲ್ಲಿ ಕ್ರಮವಾಗಿ 10 ಲಕ್ಷ ಹಾಗೂ 20 ಲಕ್ಷ ರೂ.ಗಳ ಅನುದಾನ ಹಂಚಿಕೆಯಾಗಿದ್ದು ಕ್ರಮವಾಗಿ 11.18 ಲಕ್ಷ ರೂ. ಮತ್ತು 12.10 ಲಕ್ಷ ರೂ.ಹಣ ಬಿಡುಗಡೆಯಾಗಿರುತ್ತದೆ ಹಾಗೂ 2003–04ನೇ ಸಾಲಿನಲ್ಲಿ ಅನುದಾನ ಹಂಚಿಕೆಯಾಗಿಲ್ಲದಿದ್ದರೂ ಜೂನ್–03ರವರೆಗೆ 12.17 ಲಕ್ಷ ರೂ ಮತ್ತು 19.12 ಲಕ್ಷ ರೂ.ಗಳ ಹಣ ಬಿಡುಗಡೆಯಾಗಿರುತ್ತದೆ.